ಚಿತ್ರನ್ನ ಕಟ್ಕಂಡು ಅವ್ವ ಅಪ್ಪರಿಗೆ ತಿನ್ನುಸ್ತಿದ್ದ.

ಬಿಟ್ಟುಪುರಟೌನ್ ದೊಡ್ಡೂರು. ಪಟ್ನ. ದೂರ್‍ದಾಗೆ ರೈಲ್ವೇ ಟೇಷನ್, ಎಲ್ಲ ಊರ್‍ಗೂ ಕರ್ಕಂಡೋಗು ಬಸ್ಸುಗಳು ನಿಲ್ಲೋ ಬಸ್ಟಾಂಡ್, ಸಿನಿಮಾ ಟೆಂಟ್ಗಳು, ರುಚಿರುಚಿಯಾದ ಹೋಟೆಲ್‌ಗಳು, ಮದುವೆ ಕಲ್ಯಾಣಮಂಟಪಗಳಿಂದ ತುಂಬಿತ್ತು. ರಾತ್ರಿಯೆಲ್ಲಾ ರಂಗುರಂಗಾಗಿ ಕಾಣುಸ್ತಿತ್ತು. ಆ ಹೊಸ ಪಟ್ಟಣದಲ್ಲಿ ಕದ್ರನಿಗೆ ಅನೇಕ ಹೊಸ ಗೆಳೆಯರು ಸಿಕ್ಕಿದರು. ಅಲ್ಲಿ ಜೊತೆಯಲ್ಲೇ ಓದುತ್ತಿದ್ದ ಮುಷ್ಣಿಮೂರ್ತಿ, ಲೋಕೇಶ, ಶ್ರೀನಿವಾಸ್ ಇಂಥ ಹೆಸರುಗಳುಳ್ಳವರು ಗೆಳೆಯರಾದರು. ಈ ತರಾವರಿ ಹೆಸರುಗಳ ನಡುವೆ ತನ್ನ ಹೆಸರು ಅವಮಾನದಂತೆ ಕಾಣುತ್ತಿತು ಕದ್ರನಿಗೆ. ಲೋಕೇಶ, ಮುಷ್ಣಿಮೂರ್ತಿಯರ ಜೊತೆ ಅತಿಯಾದ ಸ್ನೇಹ ಬೆಳೆಯಿತು. ಮುಷ್ಣಿಮೂರ್ತಿಯ ನಿಜವಾದ ಹೆಸರು ರುದ್ರಮೂರ್ತಿ. ಸಲಿಗೆಯಿಂದ ಅದು ಮುಷ್ಣಿಮೂರ್ತಿ ಎಂದು ಕರೆಯುವಷ್ಟಾಯಿತು. ಅವನ ಮೂತಿ ಕೋತಿಯಂಗೆ ಉದ್ದವಾಗಿದ್ದಕ್ಕೂ ಅಡ್ಡ ಹೆಸರು ಮುಷ್ಣಿಯಾಗಿತ್ತು.

ಒಮ್ಮೆ ಮುಷ್ಣಿಯ ಮನೆಗೆ ಹೋಗಿದ್ದಾಗ ಕದ್ರನಿಗೆ ಗೊತ್ತಾಗಿದ್ದು ಆ ಮುಷ್ಣಿ ಉತ್ತುಮ್ರು ಜಾತಿ. ಅಲ್ದೆ ಅವರಮ್ಮನ ತವ್ರೂರು ಕದ್ರನ ದೊಡ್ಡೊಸಳ್ಳಿಯೇ ಆಗಿದ್ದುದು. ದೊಡ್ಡೊಸಳ್ಳಿಗಿದ್ದ ಎಲ್ಲಾನೂ ಮಾರ್‍ಕಂಡು ಅದ್ನ ಬಿಟ್ಟು ಬಂದು ಮೂವತ್ನಲವತ್ತು ವರುಷಗಳಾಗಿದ್ದವು. ಊರಿನ ಸುಲಾಕು ತಿಳಿದ ಮುಷ್ಣಿಯ ತಾಯಿ ಕದ್ರನನ್ನು ಹೊರಗೇ ನಿಲ್ಲಿಸಿ, ಕುಡ್ಯೋ ನೀರನ್ನು ಬೊಗಸೆಯಲ್ಲಿ ಹೊಯ್ದಾಗ ಜೊತೆಯಲ್ಲಿದ್ದ ಲೋಕಿಗೆ ಸಿಟ್ಟುಬಂದು 'ಬಾರಲೇ' ಎಂದು ಕದ್ರನನ್ನು ಎಳೆದು ತಂದಿದ್ದ. ಇದು ತನ್ನಳ್ಳಿಯಲ್ಲಷ್ಟೇ ಅಲ್ಲ, ನಗುರ್‍ದಲ್ಲೂ ಐತೆ ಎಂಬುದು ಕದ್ರನಿಗೆ ಅರಿವಾಗಿತ್ತು. ಊರಿನ ಪರ್‍ಸೆಯಲ್ಲಿ ದೇವ್ರ ದಂಡ ಮುಟ್ಟಿದ್ದಕ್ಕೆ ತನ್ನಪ್ಪ ದಂಡ ತೆತ್ತಿದ್ದು, ನೀರಿಗಾಗಿ ಬೋರ್‍ವೆಲ್ ಹತ್ರ ಹೋಗಿ ಬೋರ್‍ವೆಲ್ ಮುಟ್ದಾಗ ನ್ಯಾಯ ಪಂಚಾಯ್ತಿ ಸೇರ್‍ಸಿ ದಂಡ ಕಟ್ಟಿದ್ದು... ಎಲ್ಲವೂ ನೆನಪಿಗೆ ಬಂದವು. ಇಲ್ಲೂ ಬಿಡ್ತಿಲ್ವಲ್ಲ ಎನಿಸಿತು. ಅದಾದ ಮರುದಿನ ಮುಷ್ಣಿ ಕದ್ರನನ್ನು ಮಾತನಾಡಿಸೋದ್ನೆಬಿಟ್ಟ.ದೂರದೂರ ಕೂತ್ಕಳ್ಳೋನು. ಆಟಕ್ಕೂ ಜೊತೆಗೆ ಬರ್‍ದಂಗಾದ. ಮೊದಲೆಲ್ಲ ಒಟ್ಗೆ ಮಧ್ಯಾನ್ದದೊತ್ತು ಊಟಮಾಡ್ತಿದ್ದೋನು ದೂರ ಆಗ್ಬಿಟ್ಟ. ಇದ್ನೆಲ್ಲ ನೋಡ್ತಿದ್ದ ಲೋಕೇಶ್ ಒಂದಿನ ಮುಷ್ಣಿನ ಕೇಳ್ದ, 'ಯಾಕಲ ಮುಷ್ಣಿ, ಆ ಕದ್ರುನ್ನ ಮಾತ್ನಾಡ್ಸೋದೇ ಇಲ್ಲ'. ಅದುಕ್ಕೆ "ಏ ಅವ್ನು 'ಅವು' ಅಂತೆ. ಅವುನ್ನ ದೂರನೇ ಇಡ್ಬೇಕಂತೆ. ನಮ್ಮಮ್ಮ ಎಷ್ಟು ಹೊಡುದ್ರು ಗೊತ್ತ. ಯಪ್ಪಾ ಬೇಡಪ್ಪ ಅವು ಸವಾಸ. ಅದಲ್ದೇ ನಮ್ಮಮ್ಮನ ಊರಲ್ಲಿ ನಮ್ತಾತ ಆ ಊರ್‍ಗೆ ಶ್ರೀಮಂತ್ರಂತೆ. ಅವ್ರೇ ನಮ್ಮ ತಾತನ ಜಮೀನ್ನ ಅದೇನ್ ಟೆನೆನ್ಸಿ ಹೆಸ್ರಲ್ಲಿ ಕಿತ್ಕಂಡವ್ರಂತೆ. ನಮ್ತಾತ ಇಲ್ಲಿಗೆ ಬಂದು ಸ್ಯಾನೆ ಕಷ್ಟಪಟ್ರಂತೆ. ಆಗ್ನಿಂದ ನಮ್ತಾತ 'ಅವ್ನುಳ' ಜೊತೆ ಸೇರ್‍ಬಾರ್‍ದು, ಅವುಗಳ ಜೊತೆ ಹೋದ್ರೆ ನಮ್ಮತ್ರ ಇರೋದ್ನೆಲ್ಲ ಕಿತ್ಕಂತರೆ ಅಂತ ಹೇಳಿದ್ರಂತೆ. ಎಂಥ ಕಷ್ಟ ಬಂದ್ರು 'ಅವ್ನುಳ' ಸಂಗ ಮಾಡ್ಬಾರ್‍ದು ಅಂತ ತಾತ ಸಾಯೋವರ್‍ಗೂ ಹೇಳ್ತಿತ್ತಂತೆ. ಅದ್ಕೆ 'ಅವು'ಗಳ ಸವಾಸನೇ ಬೇಡ. ಈ ವರ್ಷ ಪಾಸಾದ್ಮೇಲೆ ಬೇರೆ ಸ್ಕೂಲ್ಗೆ ಸೇರ್‍ತಿನಿ" ಅಂದಿದ್ನಂತೆ. ಇದನ್ನು ಹಾಗೇನೆ ತಂದು ಲೋಕೇಶ್ ಕದ್ರನಿಗೆ ಹೇಳಿದ.

ಉಳುವವನೇ ಭೂಮಿಯ ಒಡೆಯ ಕಾನೂನು ಸರ್ಕಾರದೋರು ತಂದಾಗ ಮಾರಯ್ಯ ಅವರಪ್ಪ ಅಮ್ಮನಿಗೆ ಒಬ್ಬನೇ ಮಗ. ಊರ್‍ನಾಗೆಲ್ಲ ಟೆನೆನ್ಸಿ ಸುದ್ದಿ ಹರಿದಾಡಿತ್ತು. ಅಲ್ಲಲ್ಲೇ ಟೆನೆನ್ಸಿ ವಾಲ್ಪೋಸ್ಟ್‌ಗಳು, ಪಾಂಪ್ಲೆಟ್‌ಗಳು ಚೆಲ್ಲಾಡಿದ್ವು. ಬೂಮಿಲ್ಲೋರು 'ಯಂಗೋ ಬೂಮ್ತಾಯಿ ನಮ್ಗೆ ಒಲಿತಾಳೆ' ಅಂತ ಅದನ ಮಾಡ್ದ ಆ ಪರಮಾತ್ಮನಿಗೆ ಕೈ ಮುಗುದ್ರು. 'ಬಡವರ ಅರುಸ್ರು ಅವ್ರು' ಅಂದ್ಕಂಡ್ರು. ಆದ್ರೆ ಅಂದ್ಕಂಡಂಗೆ ಆಗ್ಲೇ ಇಲ್ಲ. ಈ ಕಾನೂನು ಬಂದಾಗ ಊರ್‍ನ ಉತ್ತುಮ್ರೆಲ್ಲ ಒಂದಾಗಿ ಸೇರ್‍ಕಂಡು 'ನಮ್ಜಮೀನ್ನ ಅವರಿಗ್ಯಾಕೆ ಕೊಡ್ಬೇಕು? ನಾವು ಊರ್‍ನ ಜಮೀನ್ದಾರ್‍ರು. ನಮ್ತಾತ ಮುತ್ತಾತ್ರು ಕೊಟ್ಟಿರೋ ಆಸ್ತಿನ ಇವ್ರಿಗೆ ಕೊಟ್ಬಿಟ್ಟು ನಾವೇನು ತಿರ್‍ಪೆ ಎತ್ತಕ್ಕೆ ಹೋಗ್ಬೇಕ? ಇವ್ರಿಗ್ರೆ ಅಲ್ವ ಜಮೀನು ಕೊಡೋದು, ಅವ್ರುನ್ನೇ ಇಲ್ದಂಗೆ ಮಾಡ್ಬಿಟ್ರೆ' ಅಂತ ವಂಚಾಕಿ ದಿನರಾತ್ರಿ ಒಂದೊಂದೇ ಗುಡ್ಲು ಸುಟ್ಟಾಕಿ ಅವ್ರುನ್ನ ಊರುಬಿಟ್ಟು ಓಡುಸ್ತಿದ್ರಂತೆ. ಮಾರಯ್ಯನ ಅಪ್ಪ ಊರ್‍ನ ಕುಲ್ವಾಡಿಕೆ ಮಾಡ್ತನೆ, ಅವ್ನ ಓಡ್ಸೋದು ಬೇಡ, ಅವ್ನ ಹೇಗಾದ್ರೂ ಹೆದ್ರುಸಿ ಇಲ್ಲೇ ಇಟ್ಕಬೇಕೆಂದು ನಡುರಾತ್ರಿ ಊರ್‍ನೋರೆಲ್ಲ ಸೇರಿ ಮಾರಯ್ಯನ ಗುಡ್ಲುತಕ ಹೋಗಿ ಸೂಡಿ